ಆರು ಕೋಟಿ ರೂಪಾಯಿಗಳನ್ನು ತುಂಬಿದ್ದಾರೆ. ಆದರೆ ಇದುವರೆಗೂ ಅಲ್ಲಿ ಕಂಬವನ್ನು ಹಾಕಿಲ್ಲ. ಲೈನನ್ನು ಎಳೆದಿಲ್ಲ. ಟಿ.ಸಿ. ಗಳೂ ಬರಲಿಲ್ಲ. ಅಲ್ಲಿ ಕೆಲಸವೇ ಆಗಿಲ್ಲ. ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ನೀವು ಕೆ.ಇ.ಬಿ.ಗೆ ಕೊಟ್ಟಿದ್ದೀರಿ. ಆದರೆ ಈಗ ಇಲ್ಲಿ ಬೆಸ್ಕಾಂ ಆಗಿದೆ. ಆದುದರಿಂದ ಇದು ನಮಗೆ ಸಂಬಂಧವಿಲ್ಲ. ಸರ್ಕಾರದಲ್ಲಿ ಆ ಹಣವಿದೆ. ಸರ್ಕಾರದ ಮೇಲೆ ಒತ್ತಡ ತಂದು ನಮಗೆ ಹಣ ಕೊಡಿಸಿ. ನಂತರ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ದಯಮಾಡಿ ರೈತರು ಸಾಲಸೋಲ ಮಾಡಿ ಹಣ ತುಂಬಿದಾಗ ಆ ಹಣವನ್ನು ತೆಗೆದುಕೊಂಡು ಸರ್ಕಾರ ಕೆಲಸ ಮಾಡಿಲ್ಲ. ದಯಮಾಡಿ ಎಲ್ಲಾ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 3 ಸಾವಿರ ಎಂದು ಹೇಳಿದಂತಹ ವಿಷಯದ ಬಗ್ಗೆ ಗೊತ್ತಿಲ್ಲ. ಅದನ್ನು ತರಿಸಿ. 3 ಸಾವಿರ ಯಾವಾಗ ಕಟ್ಟಿದ್ದಾರೆ ಎನ್ನುವ ಮಾಹಿತಿ ಇಲ್ಲದೆ ಏನೂ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ನಮಗೂ ಅರ್ಥವಾಗುತ್ತಿಲ್ಲ. ತಾವು ಯಾರನ್ನು ಅಲೋ ಮಾಡುತ್ತಿದ್ದೀರೀ? ಏನು ನಡೆಯುತ್ತಿದೆ? ಸಭೆಯನ್ನು ಆರ್ಡರ್‌ನಲ್ಲಿಯಾಗಿ ಮಾಡಿ, ನಾವು ಹೇಳಬಾರದು ಎಂದು ಸುಮ್ಮನೆ ಕುಳಿತುಕೊಂಡಿದ್ದೇವೆ. ದಯವಿಟ್ಟು ಶಾಸನಸಭೆ ನಡೆಸಿ ಸಾರ್.

(ಆ) ವಿಷಯ: ಭಟ್ಕಳದ ಶಾಸಕರಿಗೆ ರಕ್ಷಣೆ ಒದಗಿಸುವ ವಿಚಾರ.

ಶ್ರೀ ಹೆಚ್.ಡಿ. ಬಸವರಾಜ (ವಿರಾಜಪೇಟೆ): ಮಾನ್ಯ ಉಪಾಧ್ಯಕ್ಷರೆ, ಇವತ್ತು ಶಾಸಕರ ರಕ್ಷಣೆ ವಿಚಾರದಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ನೀಡಿದ್ದಕ್ಕೆ ತಮಗೆ ಅಭಿನಂದಿಸುತ್ತೇನೆ. ದಿನಾಂಕ 30.06.05 ರಂದು ಭಟ್ಕಳದ ಶಾಸಕರಾದ ಮಾನ್ಯ ಶಿವಾನಂದ ನಾಯ್ಕ ಅವರ ಆಪ್ತ ಸಹಾಯಕರಿಗೆ ಒಂದು ದೂರವಾಣಿ ಕರೆ ಬರುತ್ತದೆ. ದಿನಾಂಕ 30.06.05 ರಂದು ಶಾಸಕರು ವಿಧಾನಸೌಧದ ಒಳಗಡೆ ಇದ್ದಾರೆ. ಅವರ ಆಪ್ತ ಸಹಾಯಕರಿಗೆ ದೂರವಾಣಿ ಕರೆ ಮೊಬೈಲ್‌ಗೆ ಬರುತ್ತದೆ. ಆ ಮೊಬೈಲ್‌ಗೆ

ದೂರವಾಣಿ ಕರೆ ಮಾಡಿದಂತಹ ವ್ಯಕ್ತಿ, ನಾನು ಭಟ್ಕಳದ ನಿವಾಸಿ, ನಾನು ಅಧಿವೇಶನವನ್ನು ನೋಡಬೇಕಾಗಿದೆ, ಶಾಸಕರನ್ನು ಕೂಡಲೇ ಸಂಪರ್ಕ ಮಾಡಬೇಕಾಗಿದೆ, ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ ಎಂದು ಹೇಳುತ್ತಾರೆ. ಆಗ ಆಪ್ತ ಸಹಾಯಕರು ದೂರವಾಣಿ ಮೂಲಕ ಉತ್ತರವನ್ನೂ ಕೂಡ ಕೊಡುತ್ತಾರೆ. ಶಾಸಕರು ಸದನದಲ್ಲೆ ಇದ್ದಾರೆ, ಅವರು ಸದನದಿಂದ ಹೊರಗೆ ಬಂದ ನಂತರ ತಾವೇನು ಹೇಳಿದ್ದೀರಿ ಅದನ್ನು ಅವರಿಗೆ ನಾನು ಮನವರಿಕೆ ಮಾಡುತ್ತೇನೆ. ಅವರ ಮೂಲಕ ಪಾಸನ್ನು ಪಡೆದು ಅಧಿವೇಶನ ನೋಡುವುದಕ್ಕೆ ಅವಕಾಶ ಒದಗಿಸುತ್ತೇವೆ. ಎಂದು ಹೇಳುತ್ತಾರೆ. ಆದರೆ ಈ ಸಂಭಾಷಣೆ ಕನ್ನಡದಲ್ಲೇ ನಡೆಯುವುದಿಲ್ಲ. ಹಿಂದಿಯಲ್ಲೆ ನಡೆಯುತ್ತದೆ. ಅದು 11.30ರ ಸಮಯದಲ್ಲಿ ನಡೆಯುತ್ತದೆ. ತದನಂತರ ಅವರು ಎಷ್ಟೊತ್ತಿಗೆ ಬರುತ್ತಾರೆ ಎನ್ನುವ ವಿಚಾರವನ್ನು ಆಪ್ತ ಸಹಾಯಕರು ಹೇಳುತ್ತಾರೆ. ಸುಮಾರು ಒಂದು ಅಥವಾ 1.30 ಗಂಟೆಗೆ ನೀವು ಮತ್ತೆ ನನ್ನನ್ನು ಸಂಪರ್ಕ ಮಾಡಿ ಆಗ ಶಾಸಕರು ಸದನದಿಂದ ಹೊರಗಡೆ ಬರುತ್ತಾರೆ. ಆಗ ಅಧಿವೇಶನವನ್ನು ನೋಡುವಂತಹ ಪಾಸನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳುತ್ತಾರೆ. ಮತ್ತೇ ಅದೇ ವ್ಯಕ್ತಿ ಸಮಯ 12.05ಕ್ಕೆ ಮತ್ತೆ ಫೋನ್ ಮಾಡುತ್ತಾರೆ. ಮೊದಲು ಮಾಡಿದಂತಹ ಮಾತಿನಲ್ಲೆ ಒಂದು ಸೌಜನ್ಯದ ಭಾವನೆ ಇತ್ತು. ಆದರೆ ಎರಡನೆಯ ಬಾರಿಗೆ ಮಾತನಾಡಿದಂತಹ ಸಂದರ್ಭದಲ್ಲಿ ಆ ವ್ಯಕ್ತಿ ದಬ್ಬಾಳಿಕೆ, ದರ್ಪದ ಧಾಟಿಯಲ್ಲೆ ಆಪ್ತ ಸಹಾಯಕರನ್ನು ಕೇಳುತ್ತಾರೆ. ನಾನು ಕೂಡಲೆ ಶಾಸಕರನ್ನು ನೋಡಬೇಕು, ಶಾಸಕರು ಎಲ್ಲಿದ್ದಾರೆ? ಅವರಿಗೆ ಮೊಬೈಲ್ ಕೊಡು, ನಾನು ಸದನಕ್ಕೆ , ಹೋಗಬೇಕು ಎನ್ನುವಂತಹ ಧಾಟಿಯಲ್ಲೆ ಬೆದರಿಕೆಯನ್ನು ಕೊಡುತ್ತಾರೆ. ಮತ್ತೆ ಈ ಒಂದು ವಿಚಾರ ಬಂದಂತಹ ಸಂದರ್ಭದಲ್ಲಿ ಆಪ್ತ ಸಹಾಯಕರು ಹೇಳುತ್ತಾರೆ, ಅವರು ಬಂದಿಲ್ಲ. ಸದನದ ಒಳಗಡೆ ಇದ್ದಾರೆ, ನಿಮಗೆ ಈಗಾಗಲೆ ಹೇಳಿದ್ದೇನೆ. ಆದರೂ ಕೂಡ ನೀವು ಈ ರೀತಿಯ ಧಾಟಿಯಲ್ಲೆ ಹೇಳುವುದು ಸರಿಯಲ್ಲವೆಂದು ಹೇಳಿದ್ದಾರೆ. ಆದರೆ ಆ ವ್ಯಕ್ತಿ ಮತ್ತೇ ಈ ತರಹ ಆಯಿತೆಂದರೆ ನಾನೇನು ಮಾಡಬೇಕೆಂದು ನನಗೆ ಗೊತ್ತಿದೆ, ಅದಕ್ಕೆ ನೀವು ಕಾಯಬೇಕಾಗುತ್ತದೆ, ಅದನ್ನು ನೀವು ಪ್ರತೀಕ್ಷೆ ಮಾಡಬೇಕಾಗುತ್ತದೆ ಎನ್ನುವಂತಹ ಧರ್ಪದ ಧಾಟಿಯಲ್ಲೆ ಬೆದರಿಕೆಧಾಟಿಯಲ್ಲಿ

ದೂರವಾಣಿ ಮೂಲಕ ಸಂಭಾಷಣೆಯಲ್ಲೆ ತಿಳಿಸುತ್ತಾನೆ. ಅದು ಯಾವ ಸಂದರ್ಭದಲ್ಲಿ ಎಂದರೆ ಸಮಯ 1.53 ಗಂಟೆ 36 ಸೆಕೆಂಡಿನಲ್ಲಿ ಮಾಡಿದ್ದು, ಇದಿಷ್ಟು ದಾಖಲೆ ಇದೆ. ಇವತ್ತು ನಿಮ್ಮಲ್ಲಿ ನಾವೇನು ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದರೆ ಆತನ ದಾಟಿ ಹಾಗೂ ಬಳಕೆ ಮಾಡಿದಂತಹ ಭಾಷೆಯ ಬಗೆ ಬಹುಶಃ ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಈಗಾಗಲೆ ತಮಗೆಲ್ಲರಿಗೂ ಗೊತ್ತಿದೆ. ಭಟ್ಕಳ ಒಂದು ಸೂಕ್ಷ್ಮವಾದಂತಹ ಪ್ರದೇಶ, ಹಿಂದೆ ಕೂಡ ಇದೇ ತರಹದ ಬೆದರಿಕೆ ಬಂದಂತಹ ಸಂದರ್ಭದಲ್ಲಿ ಸಭಾಪೀಠಕ್ಕೆ 1995–96 ರಲ್ಲಿ ಎಂದು ಕಾಣುತ್ತದೆ ಮಾನ್ಯ ಚಿತ್ತರಂಜನ್‌ರವರು ತಮಗೆ ರಕ್ಷಣೆ ಒದಗಿಸಬೇಕೆಂದು ಕೇಳಿಕೊಂಡಿದ್ದರು. ಆ ಸಂದರ್ಭದಲ್ಲಿ ರಕ್ಷಣೆ ಒದಗಿಸಿದ್ದರೆ, ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿದ್ದರೆ ಬಹುಶಃ ಅವತ್ತು ಹತ್ಯೆಯಾಗುತ್ತಿರಲಿಲ್ಲ. ಆದರೆ ಇವತ್ತು ಅದೇ ಭಟ್ಕಳ ಕ್ಷೇತ್ರದಿಂದ ಈಗ ಶಾಸಕರಾಗಿರುವಂತಹ ಮಾನ್ಯ ಶಿವಾನಂದ ನಾಯ್ಕ ಅವರಿಗೆ ಈ ರೀತಿ ಬೆದರಿಕೆ ಕರೆಗಳು ಬರುತ್ತದೆ. ಈ ಮಧ್ಯೆ ಇನ್ನೊಂದು ವಿಷಯವನ್ನು ಕೂಡ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅಲ್ಲೆ ತಿಮ್ಮಪ್ಪ ನಾಯಕ್ ಅವರ ಹತ್ಯೆಯಾಗಿದೆ. ಈ ಹಿನ್ನೆಲೆಯನ್ನು ಪರಿಗಣಿಸಿ ತಾವು ಶಾಸಕರಾಗಿರತಕ್ಕಂಥ ಶಿವಾನಂದ ನಾಯ್ಕ ರವರಿಗೆ ...

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಬಸವರಾರ್‌ರವರು, ಏನು ವಿಚಾರವನ್ನು ಎತ್ತಿದ್ದಾರೆ ಎಂದರೆ ಭಟ್ಕಳದ ಶಾಸಕರಿಗೆ ಸಾಕಷ್ಟು ಕರೆಗಳು ಬಂದಿವೆ, ಆದುದರಿಂದ ಅವರಿಗೆ ರಕ್ಷಣೆ ಕೊಡಬೇಕು, ಅದು ಸೂಕ್ತವಾದಂತಹ ಕ್ರಮ. ಇದರ ಬಗ್ಗೆ ತೀವ್ರವಾದಂತಹ ಚರ್ಚೆಯಲ್ಲ. ಇದಕ್ಕೂ ಮೇಲಾಗಿ ಇವತ್ತು ಹಚ್ಚಿನ ದೂರವಾಣಿ ಕರೆ ಸಾಕಷ್ಟು ಶಾಸಕರಿಗೆ ಹಾಗೂ ರಾಜಕೀಯ ಮುಖಂಡರಿಗೂ ಬರುತ್ತಿವೆ. ಇದೆಲ್ಲಾದರ ಬಗ್ಗೆ ನಾನು ಇಲ್ಲೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆದರೆ ಎಲ್ಲೆಲ್ಲಿ ಬರುತ್ತಿದೆ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಚಿತ್ತರಂಜನ್ ಅವರು ಶಾಸಕರಾಗಿದ್ದರು. ನಾವು ಈ ಮನೆಯಲ್ಲಿದ್ದಾಗ ಅವರ ಕೊಲೆಯಾಗಿದೆ. ಅಂತಹ ಒಂದು ಹಿನ್ನೆಲೆಯಲ್ಲಿ ಭಟ್ಕಳದ ಶಾಸಕರಾದ ಶಿವಾನಂದ ನಾಯ್ಕರವರಿಗೆ ಏನು ಕರೆ ಬಂದಿದೆಯೆಂದು ಹೇಳಿದ್ದಾರೆ, ನಮ್ಮ ಪೊಲೀಸ್‌ರವರಿಗೆ ಆ ತರಹದ

ಮಾಹಿತಿ ಇದೆ. ನಾವು ಅವರಿಗೆ ರಕ್ಷಣೆ ಕೊಟ್ಟಿದ್ದೇವೆ. ಅವರಿಗೆ ಅಲ್ಲ ಬೇರೆ ಶಾಸಕರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಹಾಗೂ ಮುಖಂಡರುಗಳಿಗೆ ಈ ರೀತಿಯಾಗಿ ಕರೆ ಬರುವಂತಹ ಇವತ್ತಿನ ರಾಜಕೀಯ ಸನ್ನಿವೇಶದಲ್ಲಿ, ಜಿ–8 ಶೃಂಗಸಭೆಯಲ್ಲಿ ಕೂಡ ಯಾವರೀತಿ ಘಟನೆಯಾಯಿತು ಹಾಗೂ ಇನ್ನು ಬೇರೆ ಕಡೆಗಳಲ್ಲಿ ಏನು ಘಟನೆಯಾಗಿದೆ, ಈ ಘಟನೆಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಬಹಳ ಎಚ್ಚರಿಕೆಯನ್ನು ವಹಿಸುತ್ತಿದೆ. ಈಗಾಗಲೇ ನಾನು ಆದೇಶ ಕೊಟ್ಟಿದ್ದೇನೆ, ಆ ಆದೇಶದ ಪ್ರಕಾರ ಎಲ್ಲಾ ರೀತಿಯಲ್ಲಿ ರಕ್ಷಣೆ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ.

ಉಪಾಧ್ಯಕ್ಷರು: ಆಯಿತಲ್ಲಾ, ಮನೋಹರ್ ಕಿನೇಕರ್ .

ಶ್ರೀ ಹೆಚ್.ಡಿ. ಬಸವರಾಜ್: ಬಹಳ ಅಭಿನಂದನೆಗಳು, ಎಸ್ ಎಂ ಎಸ್ ಏನು ಕಳುಹಿಸಿದ್ದಾರೆ, ಅದನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ಆ ಎಸ್ಎಮ್ಎಸ್ ಅನ್ನು ತಾವು ನೋಡಬೇಕು.

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಉಪಾಧ್ಯಕ್ಷರೆ, ನನ್ನ ಮಿತ್ರರಾದಂತಹ ಬಸವರಾಜ್ ಅವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಕರೆ ನಮಗೆ ಸಾಕಷ್ಟು ದಿವಸದಿಂದ ಬರುತ್ತಿದೆ. ಆದರೆ ಕರೆ ಮಾಡಿರುವುದು ಮುಖ್ಯವಲ್ಲ. ನನಗೆ ಒಂದು ಮೆಸೇಜ್ ಕಳುಹಿಸಿಕೊಟ್ಟಿದ್ದಾರೆ. ಯಾವ ವ್ಯಕ್ತಿ ನಮಗೆ ಕರೆ ಮಾಡಿದ್ದರು ಅವರಿ ಒಂದು ಮೆಸೇಜ್ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಈಗಾಗಲೆ ತಮಗೆ ಲಿಖಿತವಾಗಿ ಕೊಟ್ಟಿದ್ದೇನೆ.

ಉಪಾಧ್ಯಕ್ಷರು: ನೀವು ಕುಳಿತುಕೊಳ್ಳಿ, ಮಾನ್ಯ ಮನೋಹರ್ ಕಿನೇಕರ್ ಮಾತನಾಡಲಿ ಎಂದರೆ ನೀವು ಮಾತನಾಡುತ್ತೀರಿ. ಶಿವಾನಂದ್ ನೀವು ಕುಳಿತುಕೊಳ್ಳಿ.

ಶ್ರೀ ಶಿವಾನಂದ ನಾಯ್ಕ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜ್ ಅವರು ಭಟ್ಕಳದ ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ, ಈಗಾಗಲೇ ಅವರು ಹೇಳಿದ್ದಾರೆ. ಫೋನ್ ಕರೆ ಮಹತ್ವವಲ್ಲ. ಆದರೆ ಫೋನ್ ಕರೆ ಯಾರು ಮಾಡಿದ್ದಾರೆ, ಅವರು ಒಂದು ಮೆಸೇಜ್ ಕಳುಹಿಸಿಕೊಟ್ಟಿದ್ದಾರೆ. ಆ ಮೆಸೇಜ್‌ನಲ್ಲಿ ಏನು ತೋರುತ್ತಿದೆ ಎಂದರೆ ಅಮೆರಿಕಾದಲ್ಲಿ ಯಾರು

ಬಿಲ್ಡಿಂಗ್ ಕೆಡವಿ ಅದಕ್ಕೆ ಸಂಖ್ಯೆ ಏನು ಕೊಟ್ಟಿದ್ದಾರೆ, ಆ ರೀತಿ 11 ನಂಬರನ್ನು ಮುಖ್ಯವಾಗಿ ಇಟ್ಟುಕೊಂಡು ಒಂದು ಮೆಸೇಜ್ ಕಳುಹಿಸಿದ್ದಾರೆ. ಈ ಮೆಸೇಜ್ ಅರ್ಥವೇನು? ಇದನ್ನು ಯಾರು ಕಳುಹಿಸಿದ್ದಾರೆ ಎನ್ನುವಂತಹ ದೂರವಾಣಿ ನಂಬರ್ ಕೂಡ ಇದೆ. ಆ ಎಲ್ಲಾ ಮಾಹಿತಿ ಒದಗಿಸಿದ್ದೇನೆ, ಅದನ್ನು ಮಾನ್ಯ ಅಧ್ಯಕ್ಷರ ಮೂಲಕ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಟೆಲಿಫೋನ್ ನಂಬರ್ ಇದೆ, ಅದನ್ನು ಯಾರು ಮಾಡಿದ್ದಾರೆ, ಅದರ ಆಧಾರದ ಮೇಲೆ ಬೆನ್ನತ್ತಿದರೆ, ಅವನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇದು ರಿಪೀಟ್ ಆಗುವುದು ತಪ್ಪುತ್ತದೆ. ಭಟ್ಕಳ ಬಹಳ ಸೂಕ್ಷ್ಮವಾದ ಪ್ರದೇಶ, ಈಗಾಗಲೇ ತಿಮ್ಮಪ್ಪ ನಾಯಕ್‌ರವರ ಕೊಲೆಯಾಯಿತು ಚಿತ್ತರಂಜನ್ ಕೊಲೆಯಾಯಿತು. ಇಂತಹ ಸಂದರ್ಭದಲ್ಲಿ ಇನ್ನೊಮ್ಮೆ ಅನಾಹುತವಾಗದಂತೆ ತಡೆಯಬೇಕು ಎನ್ನುವಂತಾದ್ದು ನಮ್ಮ ಉದ್ದೇಶ. ಆದುದರಿಂದ ಅದರ ಕಾಪಿ ಕಳುಹಿಸಿಕೊಡುತ್ತಾರೆ. ಟೆಲಿಫೋನ್ ನಂಬರ್ ಇದೆ, ತತ್‌ಕ್ಷಣ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಧರ್ಮಸಿಂಗ್: ಮಾನ್ಯ ವಿರೋಧ ಪಕ್ಷದ ನಾಯಕರು, ದೂರವಾಣಿ ಸಂಖ್ಯೆಗಳು ಇದೆ, ಬೇರೆ ಬೇರೆ ಮಾಹಿತಿಗಳು ಇದೆಯೆಂದು ಹೇಳಿದ್ದಾರೆ. ನಾವು ಅದನ್ನು ತರಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಆದೇಶ ಮಾಡುತ್ತೇನೆ.

(e) Reg:- Increasing the Compensation amount to the family of flood victims.

SRI MANOHAR KALLAPPA KINEKAR (Uchagaon): Sir, during the last 15 days in Belgaum and Khanapur Talukas because of heavy rains all rivers and naalas are flooded. In Markandeya river 3 persons were flown away. In Kudremani village one girl expired because of collapsing of a house. For this Government has given a compensation of Rs.50,000. But this Rs.50,000 is very less. For one life we cannot value like